ದಿಃ 21.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯವಿಚಾರಣೆಃ ವಾದಿ ಪರ ಶ್ರೀ ವೈ.ಜೆ.ಆರ್ ವಕೀಲರಿಂದ ,**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಾನು ನಿಪಿ–05 ಮರಣ ಶಾಸನ ಪತ್ರವನ್ನು ನಾನೇ ಬರೆದಿರುತ್ತೇನೆ. ನಿಪಿ–05 ಪತ್ರಕ್ಕೆ ನಾನು ಸಾಕ್ಷಿದಾರನಾಗಿ ರಂಗನಾಥ .ಎಸ್ ಮತ್ತು ಕೃಷ್ಣೋಜೀರಾವ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಸಾಕ್ಷಿಯು ಸದರಿ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿಂದ್ದು ಅದನ್ನು **ಈಗಾಗಲೇ ನಿಪಿ–05(ಎ) ಮತುತ ನಿಪಿ–05(ಬಿ)** ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–05(ಸಿ)** ಎಂದು ಗುರುತಿಸಲಾಯಿತು. ನಿಪಿ–05 ಕ್ಕೆ ಮಾಯಮ್ಮ ಹೆಬ್ಬೆಟ್ಟು ಗುರುತನ್ನು ಹಾಕಿರುತ್ತಾರೆ. ಸಾಕ್ಷಿಯು ಮಾಯಮ್ಮನವರ ಹೆಬ್ಬೆಟ್ಟು ಗುರುತನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–05(ಡಿ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 17.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

1. ನಿಪಿ–05 ವಿಲ್ ಅನ್ನು ನಾನೇ ಬರೆದಿರುತ್ತೇನೆ. ನಾನೇ ವಿಲ್ ಗೆ ಸಹಿ ಮಾಡಿರುವವರ ಸಹಿಗಳನ್ನು ಗುರುತಿಸಿರುತ್ತೇನೆ. ನಿಪಿ–05 ರ ಒಂದು ಮತ್ತು ಎರಡನೇ ಹಾಳೆಗಳಲ್ಲಿ LTM of ಶ್ರೀಮತಿ ಮಾಯಮ್ಮ ಎಂದು ನಾನು ಬರೆದಿರುವುದಿಲ್ಲ ಬೇರೆಯವರು ಬರೆದಿರುತ್ತಾರೆ, ಮೂರನೇ ಹಾಳೆಯಲ್ಲಿ ಮಾತ್ರ ನಾನು LTM of ಶ್ರೀಮತಿ ಮಾಯಮ್ಮ ಎಂದು ಬರೆದಿರುತ್ತೇನೆ. ನಿಪಿ–05 ರ ಒಂದು ಮತ್ತು ಎರಡನೇ ಹಾಳೆಗಳಲ್ಲಿ LTM of ಶ್ರೀಮತಿ ಮಾಯಮ್ಮ ಎಂದು ವೈ.ಜೆ.ಆರ್ ವಕೀಲರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಕ್ರಯಪತ್ರ , ಪಹಣಿ ಮತ್ತು ಮುಟೇಶನ್ ಅನ್ನು ನೋಡಿ ನಿಪಿ–05 ಅನ್ನು ಬರೆದಿರುತ್ತೇನೆ. ನಾನು ನೋಡಿದ ಕ್ರಯ ಪತ್ರದಲ್ಲಿ

ಮಾಯಮ್ಮನವರ ಹೆಸರಿನಲ್ಲಿತ್ತು. ನಿಪಿ–05 ರಲ್ಲಿ ಬರೆದಿರುವ ಆಸ್ತಿಗಳ ಪೈಕಿ ಒಂದನೇ ಆಸ್ತಿ ಸರ್ವೆ ನಂ. 11/99 ಮತ್ತು 100/101 ರಲ್ಲಿ 20 ಗುಂಟೆ ಜಮೀನನ್ನು 05 ನೇ ಪ್ರತಿವಾದಿಗೆ 1993–94 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ–05 ರಲ್ಲಿ ಬರೆದಿರುವ ಆಸ್ತಿಗಳ ಪೈಕಿ ಒಂದನೇ ಆಸ್ತಿ ಸರ್ವೆ ನಂ. 11/99 ಮತ್ತು 100/101 ರಲ್ಲಿ 20 ಗುಂಟೆ ಜಮೀನನ್ನು 07 ನೇ ಪ್ರತಿವಾದಿಗೆ 1993–94 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಮಾಯಮ್ಮನವರು ಈಗಾಗಲೇ ಮಾರಾಟ ಮಾಡಿರುವ ಕಾರಣ ಅವರು ಮರಣ ಶಾಸನವನ್ನು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ವಿಲ್ ಅನ್ನು ಬರೆಯುವ ಸಮಯದಲ್ಲಿ ಮಾಯಮ್ಮನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೇ ಮರಣ ಶಾಸನವನ್ನು ಬರೆದಿರುತ್ತೇನೆಂದರೆ ಸರಿಯಲ್ಲ. ನಿಪಿ–05 ಅನ್ನು ಮಾಯಮ್ಮನವರು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮಾಯಮ್ಮನವರು ನಿಪಿ–05 ಕ್ಕೆ ನನ್ನ ಸಮಕ್ಷಮದಲ್ಲಿ ಹೆಬ್ಬೆಟ್ಟು ಗುರುತನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದರರರು ನಿಪಿ–05 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 17.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದ ,**

1.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ